**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ. 10661-2016**

| | |
|---|---|
| ಸಾಕ್ಷಿದಾರರ ಹೆಸರು | ಸಿ.ಆರ್. ಚೌದ್ರಿ |
| ತಂದೆಯ ಹೆಸರು | ಶೋರಾರಾಂ |
| ವಯಸ್ಸು | 73 ವರ್ಷ |
| ಉದ್ಯೋಗ | ನಿವೃತ್ತ ವ್ಯಾಪಾರ |
| ವಾಸ | ಎಸ್.ಆರ್.ನಗರ, ಬೆಂಗಳೂರು. |
| ಪ್ರಮಾಣೀಕರಿಸಿದ ದಿನಾಂಕ | 04/09/2023 |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು ಈ ಹಿಂದೆ ಗಾಣಿಗೆರ ಪೇಟೆಯಲ್ಲಿ ಪ್ರಕಾಶ ಪ್ರೋವಿಸನ್ ಸ್ಟೋರ್ ಹೆಸರಿನಲ್ಲಿ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ವಿಶಾಖಾ ಮಾರ್ಕೇಟ್ ನಲ್ಲಿ ಸೇಲ್ಸ ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದರು. ನಾನು ವಿಶಾಖಾ ಮಾರ್ಕೇಟಿಂಗ್ ನಿಂದ ಹಿಂದೂಸ್ಥಾನ ಲಿವರ್ ಲಿ., ಕಂಪನಿಯ ಉತ್ಪನ್ನಗಳನ್ನು ಖರೀದಿಸುತ್ತಿದ್ದೆ. ಆರೋಪಿಯು ವಿಶಾಖಾ ಮಾರ್ಕೇಟ್ ನ ಪರವಾಗಿ ನನಗೆ ಹಿಂದೂಸ್ಥಾನ ಲಿವರ್ ಲಿ., ಕಂಪನಿಯ ಉತ್ಪನ್ನಗಳನ್ನು ತಂದು ಕೊಡುತ್ತಿದ್ದರು, ನಾನು ಆರೋಪಿಗೆ ಹಣ ಕೊಡುತ್ತಿದ್ದೆ. ಈ ಪ್ರಕರಣದಲ್ಲಿ ಆರೋಪಿ ಮಾಡಿರುವ ಅಕ್ರಮಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಪೊಲೀಸರ ಮುಂದೆ ಆರೋಪಿಯ ವಿರುದ್ದ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಹಿ.ಸ.ಸ.ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ ಅನುಮತಿ ನೀಡಲಾಯ್ತು)

**ಪಾಟೀ ಸವಾಲು : ಹಿ. ಸ. ಸ ಅಭಿಯೋಜಕರವರಿಂದ :**

2. ಆರೋಪಿಯು ನನ್ನಿಂದ ಪಡೆದುಕೊಂಡ ಹಣದಲ್ಲಿ ಸ್ವಲ್ಪ ಹಣವನ್ನು ತನ್ನ ಸ್ವಂತಕ್ಕೆ ಉಪಯೋಗಿಸಿಕೊಂಡು ವಿಶಾಖಾ ಮಾರ್ಕೇಟಿಂಗ್ ಕಂಪನಿಗೆ ಹಣ ಸಂದಾಯ ಮಾಡದೆ ನಂಬಿಕೆ ದ್ರೋಹ ಮಾಡಿದ್ದ ವಿಷಯ ನನಗೆ ತದನಂತರದಲ್ಲಿ ಗೊತ್ತಾಯಿತು ಎಂದರೆ ಸರಿಯಲ್ಲ. ತನಿಖಾಧಿಕಾರಿಯು ನನ್ನನ್ನು ವಿಚಾರಣೆ ಮಾಡಿದಾಗ ಈಗ ಓದಿ ಹೇಳಿದ ನಿಪಿ-1 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಆರೋಪಿಯ ಅಕ್ರಮ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಇಲ್ಲ ಎಂದು ತಿಳಿಸಿದ್ದಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**